## ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಲಿಖಿತ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್.— ಸನ್ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.— ಉತ್ತರಗಳ ಪಟ್ಟಿಯನ್ನು ಸಭೆಯ ಮುಂದಿಡಲಾಯಿತು.

## ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೃಷಿ ಸಹಾಯಕರ ನೇಮಕ

೪೪೭. ಶ್ರೀ ಜಿ. ಎಸ್. ಆಚಾರ್ (ಬೈಂದೂರು).— ಮಾನ್ಯ ಕೃಷಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಕೃಷಿ ಸಹಾಯಕರ ಹುದ್ದೆಗಳು ಖಾಲಿ ಇವೆ ?

ಆ) ಈ ಹುದ್ದೆಗಳನ್ನು ತುಂಬಲು ಸರ್ಕಾರದವರು ಯಾವ ಕ್ರಮಗಳನ್ನು ಕೈಗೊಳ್ಳುವರು ?

ಶ್ರೀ ಎಂ. ಪಿ. ಪ್ರಕಾಶ್ (ಕೃಷಿ ರಾಜ್ಯ ಸಚಿವರು).—

ಅ) ೨೦೫ ಕೃಷಿ ಸಹಾಯಕರ ಹುದ್ದೆಗಳು ಖಾಲಿ ಇವೆ.

ಆ) ಕೃಷಿ ಇಲಾಖೆಯಲ್ಲಿ ನೇಮಕಾತಿ ಸಮಿತಿಯು ಆಯ್ಕೆ ಮಾಡಿದ ೭೧೧ ಅಭ್ಯರ್ಥಿಗಳು ವಿವಿಧ ಗ್ರಾಮೀಣ ಅಭಿವೃದ್ಧಿ ತರಬೇತಿ ಕೇಂದ್ರಗಳಲ್ಲಿ ಒಂದು ವರ್ಷದ ತರಬೇತಿ ಹೊಂದುತ್ತಿದ್ದಾರೆ. ತರಬೇತಿ ಮುಗಿದ ಕೂಡಲೇ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಖಾಲಿ ಇರುವ ಕೃಷಿ ಸಹಾಯಕರುಗಳ ಹುದ್ದೆಗಳನ್ನು ಆದ್ಯತೆ ಮೇಲೆ ತುಂಬಲಾಗುವುದು.

## ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೃಷಿ ಸಹಾಯಕರ ನೇಮಕ

೫೬೨. ಶ್ರೀ ವಸಂತ ವಿ. ಸಾಲ್ಯಾನ್(ಕಾಪು).—ಮಾನ್ಯ ಕೃಷಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೃಷಿ ಸಹಾಯಕರ ಹುದ್ದೆಗಳು ಎಷ್ಟು ಖಾಲಿ ಇವೆ ?

ಆ) ಆ ಪೈಕಿ ಕಾಪು ಕ್ಷೇತ್ರದಲ್ಲಿ ಎಷ್ಟು ಹುದ್ದೆಗಳು ಖಾಲಿ ಇವೆ ?

ಇ) ಇವುಗಳನ್ನು ಭರ್ತಿ ಮಾಡಲು ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದಾರೆ ?

ಶ್ರೀ ಎಂ. ಪಿ. ಪ್ರಕಾಶ್ (ಕೃಷಿ ರಾಜ್ಯ ಸಚಿವರು).—

ಅ) ೨೦೫ ಕೃಷಿ ಸಹಾಯಕರ ಹುದ್ದೆಗಳು ಖಾಲಿ ಇವೆ.

ಆ) ೧೧ ಕೃಷಿ ಸಹಾಯಕರುಗಳ ಹುದ್ದೆಗಳು ಖಾಲಿ ಇವೆ.

ಇ) ಕೃಷಿ ಇಲಾಖೆಯ ನೇಮಕಾತಿ ಸಮಿತಿಯು ಆಯ್ಕೆ ಮಾಡಿದ ೭೧೧ ಅಭ್ಯರ್ಥಿಗಳು ವಿವಿಧ ಗ್ರಾಮೀಣ ಅಭಿವೃದ್ಧಿ ತರಬೇತಿ ಕೇಂದ್ರಗಳಲ್ಲಿ ಒಂದು ವರ್ಷದ ತರಬೇತಿ ಹೊಂದುತ್ತಿದ್ದಾರೆ. ತರಬೇತಿ ಮುಗಿದ ಕೂಡಲೇ ಕಾಪು ಕ್ಷೇತ್ರದಲ್ಲಿ ಖಾಲಿ ಇರುವ ಕೃಷಿ ಸಹಾಯಕರುಗಳ ಹುದ್ದೆಗಳನ್ನು ಆದ್ಯತೆ ಮೇಲೆ ತುಂಬಲಾಗುವುದು.

## ಶಿಕಾರಿಪುರ ಸಂಚಾರಿ ಘಟಕದ ವ್ಯಾನ್ ರಿಪೇರಿ ಬಗ್ಗೆ

೭೭೪. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ) —ಮಾನ್ಯ ಪಶು ಸಂಗೋಪನ ಹಾಗೂ ಪಶು ವೈದ್ಯ ಸೇವೆಗಳ ರಾಜ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿಕಾರಿಪುರದಲ್ಲಿರುವ ಸಂಚಾರಿ ಪಶುಸಂಗೋಪನಾ ಇಲಾಖೆಗೆ ಕೊಟ್ಟಿರುವ ವ್ಯಾನ್ ಕೆಟ್ಟು ಎಷ್ಟು ತಿಂಗಳಾಯಿತು ?

ಆ) ಹಾಗಿದ್ದಲ್ಲಿ ವ್ಯಾನ್ ಚಾಲಕನಿಗೆ ಮತ್ತು ವೈದ್ಯಾಧಿಕಾರಿಗೆ ಈ ವ್ಯಾನ್ ಕೆಟ್ಟ ಸಂದರ್ಭದಲ್ಲಿ ಕೆಲಸವಿಲ್ಲದೆ ಸಂಬಳ ಕೊಡುತ್ತಿರುವುದು ಸರ್ಕಾರದ ಬೊಕ್ಕಸಕ್ಕೆ ಹಾನಿಯಾಗುತ್ತಿರುವುದು ಸರ್ಕಾರ ದವರ ಗಮನಕ್ಕೆ ಬಂದಿದೆಯೆ ?